ಬಂಟವಾಳ ತಾಲ್ಲೂಕಿನ ಬಿ. ಸಿ. ರೋಡಿನಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ.

೪೦೦. ಶ್ರೀ ರಮಾನಾಥ್ ರೈ, (ಬಂಟವಾಳ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಟವಾಳ ತಾಲ್ಲೂಕಿನ ಕೇಂದ್ರ ಸ್ಥಾನವಾದ ಬಿ. ಸಿ. ರೋಡಿನಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವ ಯೋಜನೆ ಯಾವ ಹಂತದಲ್ಲಿದೆ ?

ಆ) ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಬಂಟವಾಳ ತಾಲ್ಲೂಕಿನ ಬಿ. ಸಿ. ರೋಡ್ ರಾಷ್ಟ್ರೀಕೃತವಾಗದ ಪ್ರದೇಶದಲ್ಲಿರುವುದರಿಂದ ಸದ್ಯಕ್ಕೆ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇರುವುದಿಲ್ಲ;

ಆ) ಉದ್ಭವಿಸುವುದಿಲ್ಲ.

ಹಸಿರು ಕಾರ್ಡಿನಲ್ಲಿ ಮಾರಲಾಗುವ ಅಕ್ಕಿ ಬೆಲೆಯನ್ನು ಹೆಚ್ಚಿಸಿರುವ ಬಗ್ಗೆ.

೫೯೧ ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆಹಾರ ಮತ್ತು ಸಾರಿಗೆ ರಾಜ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಸಿರು ಕಾರ್ಡಿನಲ್ಲಿ ಮಾರಲಾಗುವ ಅಕ್ಕಿಯ ಬೆಲೆಯನ್ನು ಸರ್ಕಾರವು ಹೆಚ್ಚಿಸಿದೆಯೇ ?

ಆ) ಹಾಗಿದ್ದಲ್ಲಿ, ಎಷ್ಟು ಹೆಚ್ಚಿಸಿದೆ ಹಾಗೂ ಬೆಲೆ ಹೆಚ್ಚಿಸಲು ಕಾರಣಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಭೂರಹಿತ ಕೃಷಿ ಕಾರ್ಮಿಕರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ.

೫೯೪ ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಭೂ ರಹಿತ ಕೃಷಿ ಕಾರ್ಮಿಕರ ಸಂಖ್ಯೆ ಎಷ್ಟು ?

ಆ) ಇವರ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಇ) ಇವರ ಅಭಿವೃದ್ಧಿಗಾಗಿ ಏನಾದರೂ ವಿಶೇಷ ಯೋಜನೆಯನ್ನು ಸರ್ಕಾರದವರು ಹಾಕಿಕೊಂಡಿದ್ದಾರೆಯೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ೩೬,೫೫,೧೯೭

ಆ) ಗ್ರಾಮೀಣ ಪ್ರದೇಶದ ನಿರುದ್ಯೋಗಿ ಮತ್ತು ಅರೆ ಉದ್ಯೋಗಿ ಭೂ ರಹಿತ ಗ್ರಾಮೀಣ ಬಡವರನ್ನು ಸೇರಿದಂತೆ ಉದ್ಯೋಗವನ್ನು ಒದಗಿಸುವ ಉದ್ದೇಶದಿಂದ ಒಂದು ಬೃಹತ್ ಉದ್ಯೋಗ ಯೋಜನೆಯಾದ "ಜವಾಹರ್ ರೋಜ್‌ಗಾರ್ ಯೋಜನೆ"ಯನ್ನು ದಿನಾಂಕ ೧-೪-೮೯ ರಿಂದ